# ‘ಹೊರಗೆ ಮಳೆಯ ಧೀಂತನನ...’

ಪ್ರಿಯಸಖೀ, ಪ್ರಿಯಂವದೇ,

ಹಗಲೆಲ್ಲ ಮುಸಲಧಾರೆಯಾಗಿ ಮಳೆ ಸುರಿದರೂ ರಾತ್ರಿಯ ಹೊತ್ತಿಗೆ ಬೆವರುಬೆವರಾಗುತ್ತಿದ್ದ ಮೈಮನಸ್ಸಿಗೀಗ ಚಳಿ ಚಳಿ! ಎರಡೇ ದಿನದಲ್ಲಿ ಬೇಸಿಗೆಯ ಅಂತ್ಯಸಂಸ್ಕಾರವಾಗಿ, ಮುಂಗಾರು ಮಳೆಯ ಜನನ. ಹೊರಗಡೆ ಜಿಟಿಜಿಟಿ ಮಳೆ, ಗಾಳಿಯ ಹೋರು, ಒಳಗೆ ಗದಗುಟ್ಟಿಸುವ ನಡುರಾತ್ರಿಯ ಚಳಿ. ಮುಂಬರುವ ಪರೀಕ್ಷೆಗಳಿಗೆ ಓದುತ್ತ ಕುಳಿತವನು ಅಕ್ಷರಗಳು ಕಾಣದೇ ಕಣ್ಣು ಮಂಜಾದಂತಾದಾಗ ಪುಸ್ತಕ ಪಕ್ಕಕ್ಕಿಟ್ಟು ಗಿಟಾರ್ ಎತ್ತಿಕೊಳ್ಳುತ್ತೇನೆ. ಹೆಚ್ಚು ಸದ್ದಾಗಬಾರದೆಂದು ಕೈಬೆರಳುಗಳಲ್ಲೇ ತಂತಿಗಳ ಮೀಟುತ್ತ ಕಣ್ಣು ಮುಚ್ಚಿಕೊಳ್ಳುತ್ತೇನೆ. ಮುಚ್ಚಿದ ಕಣ್ಣುಗಳ ಕತ್ತಲಿನ ಹಿಂದೆ ಒಂದೊಂದಾಗೇ ಚಿತ್ರಗಳು ಮೂಡುತ್ತವೆ, ನನ್ನ ನಿಟ್ಟುಸಿರಿಗೆ ಕಾರಣವಾಗುತ್ತವೆ.

ದೂರದೂರಿನ ಹೊರಗೆ, ಹಸಿರು ಬನದಾಚೆ ಮೇಲೆ ಕಾಣುತ್ತಿರುವ ಹೊಸ ಚಿಗುರ ಹುಲ್ಲುಗಾವಲು, ನಡುವೆ ಒಬ್ಬಂಟಿ ಕೆಂಡ ಸಂಪಿಗೆ ಮರ, ಮೇಲೆ ಆರ್ಭಟಿಸುತ್ತಿರುವ ಕಾರ್ಮೋಡ–ಸಿಡಿಲು–ಗುಡುಗು, ಕೆಳಗೆ ತೊಯ್ದು ತೊಪ್ಪೆಯಾದ ಗುಬ್ಬಚ್ಚಿ ಭೂಮಿ, ಎರಡರ ನಡುವೆ ನಂಟು ಬೆಸೆದು ಭೋರ್ಗರೆಯುವ ಮುಂಗಾರಿನ ಸಂಜೆಮಳೆ, ಮರದಡಿಯಲ್ಲಿ ಬೇಸಿಗೆಯಲ್ಲಿ ಹೂವಾಗಿ ಅರಳಿ ಉದುರಿ ಒಣಗಿದ್ದ, ಈ ಮಳೆಗೆ ಸಿಕ್ಕು ನೆನೆದುಹೋದ ಸಂಪಿಗೆಯ ಕಂದು ಕಂದು ಹೂವಿನೆಸಳುಗಳ ಹಾಸುನೆರಳು, ಅದರ ಮೇಲೆ ನೆನೆದುಕೊಂಡು, ಬೆನ್ನ ಹುರಿಯುದ್ದಕ್ಕೂ ಛಳಕ್ಕೆನಿಸುತ್ತಿರುವ ಚಳಿಗೆ ಗಡಗಡ ನಡುಗುತ್ತ ನಿಂತಿರುವ ನಾನು, ನನ್ನೆದುರು ನೆನೆಯದೇ ನಿಂತಿರುವ ನೀನು! ನಿನ್ನೊಳಗೆ ಮಾತಿಲ್ಲ, ನಿನ್ನ ಮೌನದಲ್ಲೇ ಸಾವಿರಾರು ಪ್ರಶ್ನೆಗಳು!

ಅಳಿದುಳಿದ ಎಲೆಗಳ ಚಪ್ಪರದೊಳಗಿಂದ ನುಸುಳಿ ತಪ್ಪಿಸಿಕೊಂಡು ಬಿದ್ದ ಮಳೆ ಹನಿಗಳು, ನನ್ನ ತಲೆಗೂದಲ ನೆನೆಸಿ, ಹುಬ್ಬಿಗಿಳಿದು, ಕಣ್ಣಮುಂದೆ ನೀರಿನ ಪರದೆ ಕಟ್ಟುತ್ತವೆ. ಸಿಡಿವ ಸಿಡಿಲ ಬೆಳಕಿನೊಳಗೆ ನನ್ನ ಕಣ್ಣ ನೀರ ಪರದೆಯೊಳಗೇ ನಿನ್ನ ಕಂಗಳ ನಿರ್ಧಾರ, ಅನಿಶ್ಚಿತತೆ, ಹೊಳೆಹೊಳೆದು ಕಾಣುತ್ತದೆ, ಮತ್ತು ನನ್ನನ್ನು ಅಧೀರನನ್ನಾಗಿಸುತ್ತದೆ...

ನಿನ್ನ ನೆತ್ತಿನೆನೆದಿಲ್ಲ, ಯಾಕೆಂದರೆ ನಿನ್ನ ಕೈಯಲ್ಲಿ ಅರಳಿಕೊಂಡ ತಿಳಿನೀಲಿ ಹೂವು ಬರೆದ ಚತ್ರಿಯಿದೆ ಮತ್ತು ಆ ಚತ್ರಿಯ ನೆತ್ತಿ ನೆನೆದಿದೆ! ನನ್ನ ಕಣ್ಣ ನೀರು ನಿನ್ನ ಆರಿದ ಕಣ್ಣುಗಳಿಗೆ ಕಾಣದಾಗಿದೆ, ಯಾಕೆಂದರೆ ಅವು ದಿಬ್ಬದ ಕೆಳಗಿನ ಬೆಚ್ಚಗಿನ ಗೂಡಿನ ತೆರೆದ ಕಿಟಕಿಯಿಂದ ಬಿದ್ದ ಬೆಳಕ ನೋಡುತ್ತಿವೆ! ಚತ್ರಿ ಹಿಡಿದು ದಾಪುಗಾಲು ಹಾಕಿದರೆ, ಮೊಣಕಾಲು ನೆನೆವ ಮುನ್ನ ಆ ಗೂಡು ತಲುಪಿಕೊಳ್ಳಬಹುದು, ಗೂಡಿನೊಳಗಿನ ಬೆಚ್ಚಗಿನ, ನಚ್ಚಗಿನ ಕನಸು ನನಸು ಮಾಡಿಕೊಳ್ಳಬಹುದು ಎಂಬುದು ನಿನ್ನ ಆಸೆ. ಮತ್ತು ನಿನ್ನ ಆ ಆಸೆಯೊಳಗೆ ನಾನಿಲ್ಲ ಎಂಬುದೇ ನನ್ನ ಜೀವನದ ಅತೀದೊಡ್ಡ ನಿರಾಸೆ.

ಬೇಸಗೆಯಲ್ಲೇನೋ ಈ ಹುಲ್ಲುಗಾವಲು, ಸಂಪಿಗೆ ಮರ, ಮರದ ಹೂವುದುರಿದ ನೆರಳು, ಬೀಸಿಬರುವ ಗಾಳಿಗಂಧ ಎಲ್ಲವೂ ಚೆಂದ, ಆದರೆ ಮಳೆಗೆ? ನಿನ್ನ ಮೌನವೆಸೆವ ಪ್ರಶ್ನೆಗಳಿಗೆ ನನ್ನಲ್ಲಿ ಉತ್ತರವಿಲ್ಲ. ಸಂಪಿಗೆ ಮರದ ನೆರಳಿನ ನಂಬಿಕೆಯ ದಾರ್ಷ್ಟ್ಯದಿಂದಾಗಿ ಬಿಸಿಲು ಸೋಂಕದ ಹಾಗೆ ಕಾಪಾಡುತ್ತೇನೆ ಎಂದು ಹೇಳಿದ್ದೆ, ಆದರೆ ಮಳೆ ತಾಕದ ಹಾಗೆ, ಕುಳಿರ್ಗಾಳಿ ಮುಟ್ಟದ ಹಾಗೆ ಈ ನನ್ನ ಪ್ರೀತಿಯ ಮರದಡಿಯಲ್ಲಿ ನಿನ್ನನ್ನು ಕಾಪಿಡುವುದಾದರೂ ಹೇಗೆ? ಇದೆಲ್ಲ ನನ್ನ ಮರುಳು ಮನಸಿಗೆ ಹೊಳೆದೇ ಇರಲಿಲ್ಲ. ಯಾಕೆಂದರೆ ಈ ಮನಸಿಗೆ ನಿನ್ನದೇ ನೆನಪು–ಕನಸುಗಳ ಅರಳು–ಮರಳು!

ನಾನಿನ್ನೂ ಮೊದಲು ನನ್ನ ತಲೆಯೊಣಗಿಸಿಕೊಳ್ಳಬೇಕು, ಒಳ್ಳೆಯದೊಂದು ಚತ್ರಿ ಕೊಳ್ಳಬೇಕು, ಬಹುಶಃ ಇಬ್ಬರು ನಿಲ್ಲಬಹುದಾದಂತಹ ದೊಡ್ಡ ಚತ್ರಿ! ನಂತರ ಸಂಪಿಗೆ ಮರದಡಿಯಲ್ಲಿ ಚಿಕ್ಕದೊಂದು ಗೂಡು ಕಟ್ಟಿಕೊಳ್ಳಬೇಕು, ಗೂಡಿನೊಳಗೆ ಬೆಚ್ಚಗಿನ ದೀಪ ಹಚ್ಚಿ, ಬೆಳಕ ಚೆಲ್ಲುವಂತೆ ಮಾಡಬೇಕು, ಆ ನಂತರ ನಿನ್ನನ್ನು ಕರೆದು ತೋರಬೇಕು, ನಿನ್ನ ಒಪ್ಪಿಗೆಯ ಕಣ್ಸನ್ನೆಗೆ ಕಾಯಬೇಕು! ಅಷ್ಟಕ್ಕೂ ಇದೆಲ್ಲ ಆಗುವವರೆಗೂ ಕಾಯಲೇನು ಹಂಗು ನಿನಗೆ? ನನ್ನೆಡೆಗೆ ನೋಡದಂತೆ ಎಚ್ಚರಿಕೆ ವಹಿಸುತ್ತ, ಚತ್ರಿ ಹಿಡಿದು, ಸಂಪಿಗೆ ಮರದ ನೆನೆದ ನೆರಳಿನಿಂದ ಹೊರಕ್ಕೆ ಹೆಜ್ಜೆಯಿಡುತ್ತೀಯ, ಮೇಲೆ ಕಾರ್ಮೋಡ ಕವಿದ ಇಳಿಸಂಜೆಯ ಮಳೆಯಾಗಸದ ಎದೆಯಲ್ಲಿ ಛಳಕ್ಕೆನ್ನುವ ನೋವಿನ ಮಿಂಚು!

ನೀನು ಹೊರಟು ಹೋದರೂ ತಡೆದು ನಿಲ್ಲಿಸಲಾಗದ ರಣಹೇಡಿ ನಾನು, ನನ್ನವು ಬರೀ ಕಣ್ಣ ಕನಸ ಗೋಪುರಗಳು, ಕಣ್ಣೆನೊಳಕ್ಕೆ ನೀರಿಳಿದರೆ ಆ ಗೋಪುರಗಳೂ ಸೋರುತ್ತವೆ! ಬರೀ ನೆರಳಾಗಿ ಸುರಿಮಳೆಯಲ್ಲಿ ದಾಪುಗಾಲಿಟ್ಟುಕೊಂಡು ಹೋಗುವ ನಿನ್ನನ್ನೇ ನೋಡುತ್ತೇನೆ ನಾನು, ಮತ್ತು ಬರಿದೇ ಆಶಿಸುತ್ತೇನೆ, ‘ಈ ಮಳೆಗಾಳಿಗೆ ನಿನ್ನ ಕೈಯಲ್ಲಿ ಹೊಯ್ದಾಡುತ್ತಿರುವ ಚತ್ರಿಯಷ್ಟಾದರೂ ಹೊಯ್ದಾಡಬಾರದೇ ನಿನ್ನ ಮನಸು? ಹೊಂದಿಕೊಳ್ಳಬಾರದೇ ನನ್ನ ಕನಸಿನೊಳಕ್ಕೆ ನಿನ್ನ ಕನಸು?’

ಈಗ ಕತ್ತಲ ಬಿರುಮಳೆಯಲ್ಲಿ ನಾನೊಬ್ಬನೇ. ನನ್ನೊಡನೆ ಈ ಸಂಪಿಗೆ ಮರವೊಂದೇ. ನೀನು ದೂರ ಸಾಗಿದ ಮೇಲೆ, ಹಿಂತಿರುಗಿಯೂ ನೋಡದಂತಾದ ಮೇಲೆ, ಧೃಢ ನಿರ್ಧಾರಗೈಯ್ಯುವ, ತನ್ಮೂಲಕ ನನ್ನನ್ನು ಸಂತೈಸುವ ಕಳ್ಳನಾಟಕವಾಡುತ್ತದೆ

ನನ್ನ ಮನಸ್ಸು. 'ಬರುವ ಮುಂಗಾರಿಗೆ ಸಂಪಿಗೆ ಮರದ ನೆರಳ ಕೆಳಗೆ ನನ್ನೆದೆಯ ಪುಟ್ಟದೊಂದು ಬೆಚ್ಚಗಿನ ಪ್ರೀತಿಗೂಡು! ಕತ್ತಲು ಓಡಿಸಲು ಪುಟ್ಟದೊಂದು ಹಣತೆ!'

ಆದರೆ ಹುಡುಗೀ, ಆ ಗೂಡಿನ ನಿರೀಕ್ಷೆಯ ಹೆಸರು ನಿನ್ನದಲ್ಲ (ನೀನಾಗಲೇ ದಿಬ್ಬದ ಕೆಳಗಿನ ಬೆಚ್ಚಗಿನ ಆ ಗೂಡು ಸೇರಿಕೊಂಡಾಗಿದೆಯಲ್ಲ!), ಯಾರ ಹೆಸರು, ಯಾವ ಹೃದಯ ಆದರೊಳಕ್ಕೆ ದಾಖಲಾಗಬಹುದು ಎನ್ನುವುದೂ ಗೊತ್ತಿಲ್ಲ. ಮನಸು, ಹೃದಯವನ್ನು ಹದಗೊಳಿಸಿಕೊಂಡು ಸುಮ್ಮನೇ ಕಾಯುತ್ತ ಕುಳಿತರೆ, ಮತ್ತೆ ಚೈತ್ರದ ಒಣ ಸಂಜೆಯ ತಂಗಾಳಿಯಲ್ಲಿ ಈ ಪ್ರೀತಿಯ ಸಂಪಿಗೆಯ ಕಂಪನರಸುತ್ತ ಯಾರಾದರೂ ತೇಲುತ್ತ ಬರಬಹುದು, ಇಲ್ಲಿ ಬೆಳೆದು ನಿಂತ ಈ ಒಬ್ಬಂಟಿ ಮರವನ್ನು ನೋಡಿ ಅಚ್ಚರಿ ಪಡಬಹುದು, ಪಕ್ಕದಲ್ಲೇ ಇರುವ ನನ್ನ ಪ್ರೀತಿಯ ಎದೆಗೂಡನ್ನು ಕುತೂಹಲಕ್ಕೇ ಹೊಕ್ಕು, ಅಚ್ಚರಿಗೊಂಡು, ಮೋಹಿಸಿ, ಮಾರುಹೋಗಿ ಅಲ್ಲೇ ಪ್ರತಿಷ್ಠಾಪಿತಗೊಳ್ಳಬಹುದು, ಆಸೆಯಿದೆ ಗೆಳತೀ...

ತಟ್ಟನೆ ಕಣ್ಣುಬಿಟ್ಟು ನೋಡುತ್ತೇನೆ, ಕಣ್ಣು ಮುಚ್ಚಿಕುಳಿತು, ಆಗಲೇ ಐದು ನಿಮಿಷಗಳಾಗಿಯೇ ಹೋಗಿವೆ, ಗಿಟಾರಿನ ಮೇಲಿದ್ದ ಕೈಬೆರಳುಗಳು ಸುಮ್ಮನಾಗಿವೆ. ಅನ್ಯಮನಸ್ಕನಾಗಿಯೇ ಮೊನ್ನೆ ಕಲಿತ ಹಾಡೊಂದರ ಸ್ವರ ಪ್ರಸ್ತಾರ ಹಿಡಿದು ತಂತಿಮೀಟುತ್ತೇನೆ, ಇನ್ನೈದು ನಿಮಿಷದ ವಿರಾಮ ಅಷ್ಟೇ, ಆಮೇಲೆ ಮತ್ತೆ ಪುಸ್ತಕ ಹಿಡಿಯಬೇಕು, ಇನ್ನೊಂದು ಪಾಠ ಮುಗಿಸಬೇಕು, ನಂತರ ಮಲಗಿಕೊಳ್ಳಬೇಕು, ಬೆಳಗ್ಗೆಯಾದರೆ ಆಫೀಸಿಗೆ ಓಡಬೇಕು... ಅಂದರೆ ಪ್ರೀತಿಗೂಡು ಕಟ್ಟಿಕೊಳ್ಳುವ ಕೆಲಸವಾಗಬೇಕು...

**ಹೊರಗೆ ಸುರಿವ ಸಿಡಿಲು ಮಳೆಯ ಧೀಂತನನ...**
**ಒಳಗೆ ನೆನೆದ ಹೃದಯ ಮಿಡಿತ ತೋಂತನನ...**

**ಹ್ಯಾವ್ ಎ ನೈಸ್ ಡೇ!**

**ಶಿವಕುಮಾರ ಕೆ. ಎಸ್.**